# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 566

2) ಮಾನ್ಯ ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 11/12/2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಗಳ ಸಂಖ್ಯೆ ಎಷ್ಟು; | ಕರ್ನಾಟಕ ರಾಜ್ಯದಲ್ಲಿ ಒಟ್ಟು 12 ಕೆ.ಎಸ್.ಆರ್.ಪಿ. ಪಡೆಗಳು ಮತ್ತು 04 ಐ.ಆರ್.ಬಿ. ಪಡೆಗಳು ಕಾರ್ಯನಿರ್ವಹಿಸುತ್ತಿವೆ. |
| ಆ) | ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಗಳ ಸಂಖ್ಯೆ ಎಷ್ಟು; | ಕಲ್ಯಾಣ ಕರ್ನಾಟಕ ಭಾಗದಲ್ಲಿನ ಕಲಬುರಗಿಯಲ್ಲಿ 06ನೇ ಕೆ.ಎಸ್.ಆರ್.ಪಿ. ಪಡೆ ಮತ್ತು ಮುನಿರಾಬಾದ್ ನಲ್ಲಿ 01 ಐ.ಆರ್.ಬಿ. ಪಡೆ ಕಾರ್ಯನಿರ್ವಹಿಸುತ್ತಿವೆ. |
| ಇ) | ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಿಗೆ ಕಾನೂನು ಸುವ್ಯವಸ್ಥೆಗಳನ್ನು ಕಾಪಾಡುವ ಸಮಯದಲ್ಲಿ ಕೆ.ಎಸ್. ಆರ್.ಪಿ. ತುಕಡಿಗಳನ್ನು ನೆರೆಯ ಜಿಲ್ಲೆಯ ಕಲಬುರಗಿ ಘಟಕದಿಂದ ನಿಯೋಜಿಸಲಾಗುತ್ತಿದ್ದು, ಸದರಿ ಸ್ಥಳದಿಂದ ಜಿಲ್ಲೆಯನ್ನು ತಲುಪಲು ಅಂದಾಜು ಸುಮಾರು 4.00 ರಿಂದ 4.30 ಗಂಟೆಗಳ ಸಮಯ ತಗಲುತ್ತಿದೆ, ಇದರಿಂದ ತುರ್ತು ಸೇವೆ ಒದಗಿಸಲು ಕಷ್ಟ ಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಈ) | ಬಂದಿದ್ದಲ್ಲಿ, ರಾಯಚೂರು ಜಿಲ್ಲೆಯ ಕಾನೂನು ಸುವ್ಯವಸ್ಥೆ, ಬಂದೋಬಸ್ತು, ವಿ.ವಿ.ಐ.ಪಿ. ಭದ್ರತೆ, ಜಿಲ್ಲೆಯ ಸುರಕ್ಷಿತ ಹಾಗೂ ಗಡಿಭಾಗದ ಸುರಕ್ಷತೆಗಾಗಿ ರಾಯಚೂರು ಜಿಲ್ಲೆಯಲ್ಲಿ 13ನೇ ಕೆ.ಎಸ್.ಆರ್.ಪಿ. ತುಕಡಿಯನ್ನು ಸ್ಥಾಪಿಸುವ ಕುರಿತು ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; | 2025-26ನೇ ಸಾಲಿನಲ್ಲಿ ರಾಜ್ಯ ಕೆ.ಎಸ್.ಆರ್.ಪಿ. ಘಟಕದಲ್ಲಿ 02 ಭಾರತೀಯ ಮೀಸಲು ಪಡೆಗಳನ್ನು ಒಟ್ಟಾರೆ 2014 ಹುದ್ದೆಗಳೊಂದಿಗೆ ಸೃಜಿಸಲು ಸಹಮತಿ ನೀಡಲಾಗಿದ್ದು, ಸದರಿ 02 ಭಾರತೀಯ ಮೀಸಲು ಪೊಲೀಸ್ ಪಡೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಗೊಳ್ಳ ಬೇಕಾಗಿರುವುದರಿಂದ, ಪ್ರಸಕ್ತ ಸಾಲಿಗೆ ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆ.ಎಸ್. ಆರ್.ಪಿ. ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. |
| ಉ) | ಇದ್ದಲ್ಲಿ, ಯಾವ ಹಂತದಲ್ಲಿದೆ ಹಾಗೂ ಯಾವ ಕಾಲಮಿತಿಯೊಳಗೆ ರಾಯಚೂರು ಜಿಲ್ಲೆಯಲ್ಲಿ ಹೊಸ ಕೆ.ಎಸ್.ಆರ್.ಪಿ. ಪಡೆಯನ್ನು ಸ್ಥಾಪಿಸಲಾಗುವುದು? | |

**ಸಂಖ್ಯೆ: ಹೆಚ್‌ಡಿ 220 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.